# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂ ಎಫ್ ಸಿ ರವರ ನ್ಯಾಯಾಲಯ, ಮಳವಳ್ಳಿ

## ಸಿಸಿ ನಂಃ **142/2021**

ಪಿರ್ಯಾದಿ ಃ ರಾಜ್ಯ ಸರ್ಕಾರ,
ಹಲಗೂರು ಪೊಲೀಸ್ ಠಾಣೆ ಮುಖೇನ.

- ವಿರುದ್ಧ -

ಆರೋಪಿ **02** ಃ ನಾಗೇಶ.ಜಿ.ಎನ್ ಬಿನ್ ನಾಗರಾಜು
ವಯಸ್ಸುಃ 18 ವರ್ಷ,
ವಾಸ ಃ ಗೊಲ್ಲರದೊಡ್ಡಿ ಗ್ರಾಮ,
ಕಸಬಾ ಹೋಬಳಿ, ಮದ್ದೂರು ತಾಲ್ಲೂಕು,
ಮಂಡ್ಯ ಜಿಲ್ಲೆ.

ಕಲಂ 313 ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ಆರೋಪಿಯ ಹೇಳಿಕೆ.

1) ಅಭಿಯೋಜನೆ ಪರ ಹೇಳಿದ ಸಾಕ್ಷಿಗಳ ಹೇಳಿಕೆಯನ್ನು ಕೇಳಿದ್ದೀರಾ?

ಉತ್ತರಃ

2) ಪ್ರಾ.ಸಾ4 ಶ್ರೀ ಪುರುಷೋತ್ತಮ್.ಜಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದೇನೆಂದರೆ, ದಿ: 24.02.2021 ರಂದು ಠಾಣಾ ಪ್ರಭಾರೆಯಲ್ಲಿದ್ದಾಗ ಚಾಸಾ1 ರವರು ಠಾಣೆಗೆ ಹಾಜರಾಗಿ ಬೆಳಿಗ್ಗೆ 11.30 ರ ಸಮಯದಲ್ಲಿ ನೀಡಿದ ದೂರನ್ನು ಸ್ವೀಕರಿಸಿ, ಠಾಣಾ ಗುನ್ನೇ ಸಂಖ್ಯೆ 50/2021 ರಂತೆ ಪ್ರಕರಣ ದಾಖಲು ಮಾಡಿರುವುದಾಗಿ, ಅದೇ ದಿನ ಚಾಸಾ1 ರವರು ತೋರಿಸಿದ ಸ್ಥಳದಲ್ಲಿ ಚಾಸಾ3 ಮತ್ತು 4 ರವರ ಸಮಕ್ಷಮ ಮಧ್ಯಾಹ್ನ 2 ರಿಂದ 3 ಗಂಟೆಯ ಸಮಯದಲ್ಲಿ ಪಂಚನಾಮೆ ಜರುಗಿಸಿ ಸದರಿ ಕಾಲಕ್ಕೆ ಬೈಕ್‌ಗಳನ್ನು ಅಮಾನತ್ತು ಪಡಿಸಿಕೊಂಡಿರುವುದಾಗಿ, ಸದರಿ ಕಾಲಕ್ಕೆ ಕಚ್ಚಾ ನಕಾಶೆಯನ್ನು ತಯಾರು ಮಾಡಿ ಸದರಿ ಕಾಲಕ್ಕೆ ಫೋಟೋಗಳನ್ನು ತೆಗೆಸಿರುವುದಾಗಿ, ಅಮಾನತ್ತು ಪಡಿಸಿಕೊಂಡ ಬೈಕ್‌ಗಳ ಸಂಬಂಧವಾಗಿ ಮಾಲುಪಟ್ಟಿಯನ್ನು ತಯಾರು ಮಾಡಿರುವುದಾಗಿ, ದಿ:14.03.2021 ರಂದು ಆಸ್ಪತ್ರೆಯಿಂದ ಬಂದ ಮೆಮೋವನ್ನು ಸ್ವೀಕರಿಸಿ, ನ್ಯಾಯಾಲಯದ ಅನುಮತಿ ಮೇರೆಗೆ ಭಾ.ದಂ.ಸಂಹಿತೆ ಕಲಂ 304(ಎ)ನ್ನು ಪ್ರಕರಣಕ್ಕೆ ಅಳವಡಿಸಿಕೊಂಡಿರುವುದಾಗಿ, ಅದೇ ದಿನ ಸರ್ಕಾರಿ ಆಸ್ಪತ್ರೆಗೆ ಅವರು ಮತ್ತು ಸಿಬ್ಬಂದಿಗಳು ಭೇಟಿ ನೀಡಿ, ಶವ ತನಿಖೆಯನ್ನು ಜರುಗಿಸಿ ಶವವನ್ನು ಅವರ ಸಂಬಂಧಿಕರ ವಶಕ್ಕೆ ನೀಡಿ, ಚಾಸಾ8 ಮತ್ತು 9 ರವರ ಹೇಳಿಕೆಯನ್ನು ದಾಖಲು ಮಾಡಿರುವುದಾಗಿ, ದಿ: 03.03.2021 ರಂದು 4ನೇ ಆರೋಪಿಗೆ ಕಲಂ 133 ರಂತೆ ನೋಟೀಸ್ ಅನ್ನು ಜಾರಿ ಮಾಡಿ, ಉತ್ತರ ಪಡೆದಿರುವುದಾಗಿ, ಅದೇ ದಿನ ಸದರಿಯವರಿಂದ ಇಂಡಿಮ್ನಿಟಿ ಬಾಂಡ್ ಪಡೆದು ಬೈಕ್‌ನ್ನು ಬಿಡುಗಡೆ ಮಾಡಿರುವುದಾಗಿ, ಮಾಲೀಕರಿಂದ ಸದರಿ ಕಾಲಕ್ಕೆ

ದಾಖಲೆಗಳನ್ನು ಪಡೆದಿರುವುದಾಗಿ, ಚಾಸಾ2 ರವರ ಹೇಳಿಕೆಯನ್ನು ದಾಖಲು ಮಾಡಿರುವುದಾಗಿ, ಮುಂದಿನ ತನಿಖೆಯನ್ನು ಚಾಸಾ19 ರವರಿಗೆ ವಹಿಸಿಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ**?**

ಉತ್ತರಃ

3) ಪ್ರಾ.ಸಾ5 ಶ್ರೀ ಧನರಾಜ್.ಡಿ.ಪಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದೇನೆಂದರೆ, ದಿ:08.04.2021 ರಂದು ಪ್ರಕರಣದ ಕಡತವನ್ನು ಚಾಸಾ-18 ರವರಿಂದ ಪಡೆದು ಪರಿಶೀಲಿಸಿ ಅದೇ ದಿನ ಮೃತ ರವಿಕುಮಾರ್ ರವರ ಪಿ.ಎಂ. ವರದಿಯನ್ನು ಸ್ವೀಕರಿಸಿರುವುದಾಗಿ, ದಿ:23.06.2021 ರಂದು ಕೆಎ-11-ಇಎನ್-6194 ಮತ್ತು ಚಾರ್ಸಿ ನಂ.MD625CF11E1H45879 ನಂಬರ್‌ನ ವಾಹನಗಳ ತಪಾಸಣೆ ಮಾಡುವಂತೆ ಆರ್.ಟಿ.ಓ ರವರಿಗೆ ಮನವಿಯನ್ನು ಸಲ್ಲಿಸಿರುವುದಾಗಿ ಮತ್ತು ಐಎಂವಿ ವರದಿಯನ್ನು ಸ್ವೀಕರಿಸಿರುವುದಾಗಿ, ದಿ:10.09.2021 ರಂದು ಮೇಲೆ ಹೇಳಿದ ಚಾರ್ಸಿ ನಂಬರ್ MD625CF11E1H45879 ಮಾಲೀಕರಾದ 3 ನೇ ಆರೋಪಿಗೆ ಕಲಂ 133 ರಂತೆ ನೋಟೀಸ್ ನೀಡಿ, ಉತ್ತರ ಪಡಿದಿರುವುದಾಗಿ, 2 ಮತ್ತು 3 ನೇ ಆರೋಪಿಗಳಿಗೆ ಕಲಂ 41 ಎ ರಂತೆ ನೋಟೀಸ್ ಜಾರಿ ಮಾಡಿ ಅವರನ್ನು ದಸ್ತಗಿರಿ ಮಾಡಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುವುದಾಗಿ, ಅದೇ ದಿನ ಚಾಸಾ10 ರವರ ಹೇಳಿಕೆಯನ್ನು ದಾಖಲು ಮಾಡಿರುವುದಾಗಿ, ದಿ:21.09.2021 ರಂದು ಭಾರತೀನಗರದ ಆದಿತ್ಯಾ ಮೋಟಾರ್ಸ್ ರವರಿಗೆ ಚಾರ್ಸಿ ನಂಬರ್ MD625CF11E1H45879 ಗೆ ಸಂಬಂಧಿಸಿದ ದಾಖಲೆಯನ್ನು ನೀಡುವಂತೆ ಕೋರಿರುವುದಾಗಿ ಮತ್ತು ಅವರಿಂದ ದಾಖಲೆಗಳನ್ನು ಸ್ವೀಕರಿಸಿರುವುದಾಗಿ, ತನಿಖೆ ಪೂರೈಸಿ ಆರೋಪಿಗಳ ವಿರುದ್ಧ ದೋಷರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನು ಹೇಳುವಿರಿ**?**

ಉತ್ತರಃ

4) ನಿಮ್ಮ ಪರ ಸಾಕ್ಷ್ಯ ವಿಚಾರಣೆ ಮಾಡಿಸುವಿರಾ**?**

ಉತ್ತರಃ

5) ನೀವು ನ್ಯಾಯಾಲಯಕ್ಕೆ ಹೆಚ್ಚುವರಿಯಾಗಿ ಏನಾದರೂ ಹೇಳುವುದು ಇದೆಯೇ**?**

ಉತ್ತರಃ

(ಮೇಲ್ಕಂಡ ಆರೋಪಿಯ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಂಡು ಆರೋಪಿ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸುತ್ತೇನೆ.)

ದಿನಾಂಕ 17.03.2026

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.